# ಕರ್ನಾಟಕ ವಿಧಾನಸಭೆ
# KARNATAKA LEGISLATIVE ASSEMBLY

*Saturday, the 13th November, 1976/Karthika 22, 1898 S.E.*

The House met in the Assembly Chamber, Vidhana Soudha, at Nine of the Clock.

[MADAM SPEAKER (SMT. K. S. NAGARATHNAMMA) in the Chair]

## STARRED QUESTIONS
## (to which Oral Answers were given)

### Buildings for Girls' Hostels at Mudigere and Chickmagalur.

53. SRI G. PUTTASWAMY (Mudigere)—Will the Minister for Social Welfare and Backward Classes be pleased to state.—

(*a*) whether Government is aware that the inmates of the General Girls' Hostels at Mudigere and Chickmagalur are inconvenienced for want of a separate buildings for them ;

(*b*) whether Government intend to construct hostel buildings in the above places to give more fucilities for their study and if so, whether Plans and Estimates have been prepared ?

SRI V. L. PATIL (Minister for Social Welfare and Backward Classes.)—.

(*a*) Yes.

(*b*) Yes. Plans and Estimates are being obtained.

ಶ್ರೀ ಜಿ. ಪುಟ್ಟಸ್ವಾಮಿ.—(ಅ)ಪ್ರಶ್ನೆಗೆ ಉತ್ತರವಾಗಿ ನಕ್ಷೆ ಹಾಗೂ ಅಂದಾಜುಗಳನ್ನು ಪಡೆಯರಾಗುತ್ತಿದೆಯೆಂದು ಹೇಳಿದ್ದೀರಿ. ಅಂದಮೇಲೆ ಅವನು ಮುಂಜೂರಾತಿ ಮಾಡುವುದಕ್ಕೆ ಇನ್ನು ಎಷ್ಟು ಕಾಲಾವಕಾಶ ಬೇಕಾಗುತ್ತದೆ ? ಎಷ್ಟು ಹಣವನ್ನು ಈಗಾಗಲೇ ಈ ಯೋಜನೆಗೆ ಪ್ರೊವೈಡ್ ಮಾಡಿದ್ದೀರಿ ? ಜಾಗ್ರತೆಯಾಗಿ ಆ ಹಾಸ್ಟಲ'ಗಳನ್ನು ಕಟ್ಟುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತೀರಾ ?

† ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಕೇಳಿರುವ ಹಾಗೆ ಈಗ ಅಲ್ಲಿ ಸ್ಥಳ ಬಹಳ ಕಡಿಮೆಯಾಗಿದೆ. ಅದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದಾರೆ, ಆ ಸ್ಥಳವನ್ನು ಸರ್ಕಾರ ತೆಗೆದುಕೊಂಡು ಅಲ್ಲಿಯೇ ಹಾಸ್ಟಲನ್ನು ಕಟ್ಟಿಸುವುಕ್ಕಾಗುತ್ತದೆಯೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಅಲ್ಲಿ ಎಷ್ಟು ಹಾಸ್ಟಲ್‌ಗಳನ್ನು ಕಟ್ಟಿಸಬೇಕೆಂಬ ಬಗ್ಗೆಯೂ ನಮ್ಮ ಪ್ರೊಗ್ರಾಂನಲ್ಲಿದೆ. ಆ ಸ್ಥಳ ಸಿಕ್ಕಿದನಂತರ ಅದನ್ನು ತೀವ್ರವಾಗಿ ತೆಗದುಕೊಳ್ಳುತ್ತೇವೆ.

---

Asterisks indicate that remarks or speeches have not been revised by the member concerned.

ಶ್ರೀ ಜೆ. ಎಲ್. ಕಬಾಡೆ.—ಕೆಣ್ಣುಮಕ್ಕಳ ಹಾಸ್ಟಲ್‌ಗಳನ್ನು ಕಟ್ಟುವ ನಲುವಾಗಿ ಈ ರಾಜ್ಯದಲ್ಲಿ ಬೃಹತ್ ಯೋಜನೆಯನ್ನಾದರೂ ಸೋಷಿಯಲ್ ಡಿಪಾರ್ಟ್‌ಮೆಂಟಿನವರು ಕೈಗೊಂಡಿದ್ದಾರೆಯೇ ?

ಶ್ರೀ ಎ. ಎಲ್ ಪಾಟೀಲ್.—ನಂಬಂಧಪಟ್ಟ ಇಲಾಖೆ ಯೋಜನೆಯನ್ನು ಕೈಗೊಂಡಿದೆ. ಇಷ್ಟೂರೊಳಗೆ ಆ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರ ಬಗ್ಗೆ ತೀವ್ರ ಗಮನವನ್ನು ಕೊಡುತ್ತಿದ್ದೇವೆ

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮೂಡಿಗೆರೆ ಜನರಲ್ ಗರ್ಲ್ಸ್ ಹಾಸ್ಟಲ್ ಕಟ್ಟುವುದಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆಯೆಂದು ಹೇಳುತ್ತಿದ್ದೀರಿ ಆ ತಾಲ್ಲೂಕು ಲೆವರ್‌ನಲ್ಲಿ ಇರತಕ್ಕ ಹಾಸ್ಟಲ್‌ಗಳ ಸಂಖ್ಯೆ ಎಷ್ಟು, ಅದಕ್ಕಾಗಿ ಅಂದಾಜು ಮಾಡಿರುವ ಹಣವೆಷ್ಟು? ಆ ಬಗ್ಗೆ ಬಡ್ಜೆಟ್‌ನಲ್ಲಿ ತಕ್ಕ ಪ್ರಾವಿಷನ್ನನ್ನು ಮಾಡಿದ್ದೀರಾ ?

ಶ್ರೀ ಎ ಎಲ್. ಪಾಟೀಲ್.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಾಗಾದರೆ ಮೂಡಿಗೆರೆ ಹಾಸ್ಟಲ್ ರಿಪೇರಿ ಮಾಡುವುದಕ್ಕೆ ಈಗಾಗಲೇ ಕ್ರಮ ಕೈಗೊಳ್ಳುತ್ತಿದ್ದೀರಿ. ಆದರೆ ಚಿಕ್ಕಮಗಳೂರು ಹಾಸ್ಟಲಿಗೆ ಸ್ಥಿತಿ ಇಲ್ಲ. ಹಣವನ್ನು ಸಹ ಬಡ್ಜೆಟ್‌ನಲ್ಲಿ ಆ ಬಾಬಿಗೆ ಪ್ರೊವೈಡ್ ಮಾಡಿಲ್ಲ. ಹಣ ಅಲ್ಲಿಗೆ ಪ್ರೊವೈಡ ಮಾಡಿ ಅಲ್ಲ ಸ್ಕೆಟ್ ಕೊಂಡುಕೊಳ್ಳುವುದಕ್ಕಾಗಲೀ ಅಥವಾ ಬಿಲ್ಡಿಂಗ್ ಕೊಂಡು ಕೊಳ್ಳುವುದಕ್ಕಾಗಲೀ ಪ್ರಯತ್ನಮಾಡುತ್ತೀರಾ ?

ಶ್ರೀ ಎ. ಎಲ್. ಪಾಟೀಲ್.—ಅಲ್ಲಿ ಸ್ಕೆಟ್ ನೋಡಿ ಬಿಲ್ಡಿಂಗ್ ಪ್ರೊಗ್ರಾಂ ಪ್ರಕಾರ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗಿದೆ. ರೆಂಟೆಡ್ ಬಿಲ್ಡಿಂಗ್ ಸಿಕ್ಕಿದರೆ ಅದನ್ನು ತೆಗೆದುಕೊಂಡು ಈ ದೂರನ್ನು ದೂರ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ.

## Road from Somayya Sugar Factory to Bisnal Village

74. SRI K. P. NADAGOUDA (Mudhol)—Will the Minister for Public Works be pleased to state.—

(*a*) the estimated cost of construction of a new road from Somayya Sugar Factory to Bisnal Village in Mudhol Taluk, District Bijapur ;

(*b*) the total amount spent on this road ;

(*c*) the agency through which this road was constructed ?

SRI M, MALLIKARJUNASWAMY (Minister for Public Works)—

(*a*) Rs. 1-29 lakhs

(*b*) Rs. 46,323 to end of June 1976

(*c*) The work is entrusted to registered contractors on piece work system.

ಶ್ರೀ ಕೆ. ಪಿ. ನಾಡಗೌಡ.—ಈ ರಸ್ತೆಯನ್ನು ಮಾಡುವ ಅವಶ್ಯಕತೆ ಏನಿತ್ತು ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ – ಅಲ್ಲಿ ಕಬ್ಬನ್ನು ಸಾಗಿಸುವುದಕ್ಕೆ ರಸ್ತೆ ಬೇಕೆಂದು ಆ ಭಾಗದಿಂದಲೇ ಅನೇಕ ರೈತರು ಮತ್ತು ಇತರರು ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಪ್ರವಾಸ ಮಾಡಿದಾಗ ತಿಳಿಸಿದ್ದರು. ಹಾಗೆ ಅರ್ಜಿಯನ್ನೂ ಸಹ ಅದರ ಬಗ್ಗೆ ಕೊಟ್ಟಾದ ಮೇಲೆ ಅದರ ಒಂದು ಅವಶ್ಯಕತೆ ಇದೆಯೆಂದು ಸರ್ಕಾರ ತಿಳಿದ ನಂತರ ಆ ಬಗ್ಗೆ ಮಂಜೂರಾತಿಯನ್ನು ಕೊಡಲಾಯಿತು